O.S.120/2016

PW : 2

ದಿನಾಂಕ 01-07-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಆರ್ ಕೆ ವಕೀಲರಿಂದಃ

ದಾವೆಯ ಮಾಹಿತಿ ಇದೆ. ದಾವಾಸ್ತಿಯನ್ನು ನೋಡಿದ್ದೇನೆ. ದಾವಾಸ್ತಿಯ ನಿವೇಶನ ಸಂಖ್ಯೆ 89 ಅದರ ಚಕ್ಕುಬಂದಿ ಗೊತ್ತಿಲ್ಲ. ದಾವಾಸ್ತಿಯ ಉತ್ತರಕ್ಕೆ ಸಂಕೀರಣದ ಕಟ್ಟದ ಇದೆ ಎಂದರೆ ಸಾಕ್ಷಿ ದಿಕ್ಕು ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಿವೇಶನದ ಸಂಖ್ಯೆ 90 ●ಯಾವ ದಿಕ್ಕಿಗೆ ಬರುತ್ತದೆ ಎಂದು ಗೊತ್ತಿಲ್ಲ. 2ನೇ ಪ್ರತಿವಾದಿ ಗೊತ್ತು. ನೀವು ದಾವಾಸ್ತಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಬಳಿ ನನಗೆ ಸೇರಿದ ಆಸ್ತಿ ಇಲ್ಲ, ಸಾಕ್ಷಿ ಅದೇ ಸಾಲಿನಲ್ಲಿ ಇದೆ ಎನ್ನುತ್ತಾರೆ. ನನಗೆ ಸೇರಿದ ಸ್ವತ್ತಿನ ಸಂಖ್ಯೆ ಪ್ಲಾಟ್ ನಂ.68. ವಾದಿ ಕಟ್ಟಡ ಕಟ್ಟುವಾಗ ನೀವು ಇದ್ದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ಸಾಕ್ಷಿ ದಾವಾಸ್ತಿ ಖಾಲಿ ಇದ್ದಾಗ ನಾನು ಇದ್ದೆ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿರುವ 3 ನೇ ಕಂಡಿಕೆಯಲ್ಲಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ, ವಾದಿಗಳ ಪರಿಚಯ ಇದೆ. ಅವರು ನಿಮ್ಮನು ಸಾಕ್ಷಿ ನುಡಿಯಲು ಕರೆತಂದಿದ್ದಾರೆ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ●ಯಾಲಯದಲ್ಲಿ ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

Sd/

ಪ್ರಧಾನ ದಿವಾಣಿ ನ್ಯಾ●ಯಾಧೀಶರು,

ರಾಣೇಬೆನ್ನೂರು.